CLICK HERE TO DOWNLOAD ANNEXURE FOR THIS ANSWER

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **2222** |
| **ಸದಸ್ಯರ ಹೆಸರು** | : | **ಶ್ರೀ ಚಿದಾನಂದ ಎಂ.ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **26.03.2026** |
| **ಉತ್ತರಿಸಬೇಕಾದ ಸಚಿವರು** | : | **ಉಪ ಮುಖ್ಯಮಂತ್ರಿರವರು** |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಡಾ: ಕೆ.ಶಿವರಾಮ ಕಾರಂತ ಬಡಾವಣೆಯ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರತಿಯನ್ನು ನೀಡುವುದು; | ಡಾ\|\|ಕೆ.ಶಿವರಾಮಕಾರಂತ ಬಡಾವಣೆಯ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶಗಳ ಪ್ರತಿಯನ್ನು ಸಿ.ಡಿಯಲ್ಲಿ ಒದಗಿಸಲಾಗಿದೆ. |
| (ಆ) | ಬಿ.ಡಿ.ಎ ಭೂಸ್ವಾಧೀನಕ್ಕೆ ಪೂರ್ವದಲ್ಲಿ ರೈತರು ತಮ್ಮ ಜಮೀನಿನಲ್ಲಿ ನಿರ್ಮಿಸಿರುವ ಮನೆಗಳ ವಿಸ್ತೀರ್ಣವನ್ನು ಅವರಿಗೆ ಕೊಡುವ ಶೇ.40%ರ ಪರಿಹಾರದಲ್ಲಿ ಕಳೆಯಲಾಗುವುದೇ ಇಲ್ಲದೆ ಇದ್ದರೆ ಇದನ್ನು ಯಾವ ರೀತಿಯಲ್ಲಿ ಲೆಕ್ಕ ಮಾಡಲಾಗುವುದು; | ಬಿ.ಡಿ.ಎ ಭೂಸ್ವಾಧೀನಕ್ಕೆ ಪೂರ್ವದಲ್ಲಿ ರೈತರು ತಮ್ಮ ಜಮೀನಿನಲ್ಲಿ ನಿರ್ಮಿಸಿರುವ ಮನೆಗಳ ವಿಸ್ತೀರ್ಣವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ರಚಿಸಲಾಗಿದ್ದ ಜೆ.ಸಿ.ಸಿ ಕಮಿಟಿಯಿಂದ ಸಕ್ರಮಗೊಳಿಸಿದಲ್ಲಿ ಸದರಿ ಕಟ್ಟಡ /ಮನೆಯ ವಿಸ್ತೀರ್ಣವನ್ನು ಭೂಪರಿಹಾರವಾಗಿ ನೀಡಲಾಗುವ ಶೇಕಡ 40ರಷ್ಟು ಅಭಿವೃದ್ಧಿಪಡಿಸಿದ ನಿವೇಶನಗಳ ವಿಸ್ತೀರ್ಣದಲ್ಲಿ ಕಳೆದು, ಬಾಕಿ ವಿಸ್ತೀರ್ಣಕ್ಕೆ ಪರಿಹಾರ ನೀಡಲಾಗುವುದು. |
| (ಇ) | ರೈತರು ತಮ್ಮ ಜಮೀನಿನಲ್ಲಿ ನಿರ್ಮಿಸಿರುವ ಕಟ್ಟಡಗಳಿಗೂ ಅಭಿವೃದ್ಧಿ ಶುಲ್ಕ ವಿಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದು ರೈತರಿಗೆ ಮಾಡುವ ಅನ್ಯಾಯವಲ್ಲವೇ; ರೈತರಿಗೆ ಅಭಿವೃದ್ಧಿಪಡಿಸಿದ ನಿವೇಶನದಲ್ಲಿ ಶೇ.40%ರ ಪರಿಹಾರ ನೀಡುವುದರಲ್ಲಿ ಸದರಿ ನಿವೇಶನ ಅಳತೆಯನ್ನು ಪರಿಗಣಿಸುವುದಾದರೆ ಅಭಿವೃದ್ಧಿ ಶುಲ್ಕದಿಂದ ರೈತರಿಗೆ ಅನ್ಯಾಯವಾಗಲಿದ್ದು ಇದರ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು; | ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪ್ರಕರಣ ಸಂಖ್ಯೆ:MA No.1614-1616/2019 in CA No.7661-7663/2018 ದಿನಾಂಕ:03.12.2020ರಲ್ಲಿ ನೀಡಿರುವ ಆದೇಶ ಹಾಗೂ ತದ ನಂತರದ ಆದೇಶಗಳನ್ವಯ ಸಕ್ರಮಗೊಳಿಸಿದ ಕಟ್ಟಡಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1976ರ ಕಲಂ 20 ರಡಿ ನಿರ್ದಿಷ್ಟಪಡಿಸಿರುವಂತೆ ಪುರೋಭಿವೃದ್ಧಿ ತೆರಿಗೆಯನ್ನು ವಿಧಿಸಲಾಗುತ್ತಿದೆ. |
| ಈ) | ರೈತರ ಜಮೀನು, ಮನೆಯ ಪಕ್ಕದಲ್ಲಿ ಉಳಿಯುವ ಶೇ.40% ಕ್ಕೂ ಹೆಚ್ಚು ವಿಸ್ತೀರ್ಣದಲ್ಲಿ ಬರುವ ಜಾಗವನ್ನು ರೈತರಿಗೆ ಸದರಿ ಜಾಗವನ್ನು ಬಿಡುವಾಗ ಅವರಿಗೆ ಎಷ್ಟು ದರ ವಿಧಿಸಲಾಗುವುದು? | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿಯಮಾವಳಿಗಳನ್ವಯ ಕ್ರಮಕೈಗೊಳ್ಳಲಾಗುವುದು. |

**ಸಂಖ್ಯೆ: ನಅಇ 159 ಬೆಂಅಸೇ 2026(ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ